**PW**-03

**CW**-07

**ದಿನಾಂಕಃ 01.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಜಿ ಹೆಚ್ ಅವರಿಂದಃ**

1. ಘಟನೆಯ ಸಮಯದಲ್ಲಿ ನಾನು ಇನ್ನೂ ಟ್ರ್ಯಾಕ್ಟರನ್ನು ಸಿಂಗಾರ ಮಾಡುತ್ತಿದ್ದೆ. ನಮ್ಮ ಚಿಕ್ಕಪ್ಪನ ಮನೆಯ ಬಲಗಡೆ ಲಕ್ಷ್ಮಣ ಕಾಕು ಅವರ ಮನೆ ಇದ್ದು , ಎಡಗಡೆ ನಿಂಗಪ್ಪ ಹೀರೆಕಣಗಿ ಇವರ ಮನೆ ಇದೆ. ನಂತರ ದೇವಸ್ಥಾನದಿಂದ ಸ್ವಲ್ಪ ಮುಂದುಗಡೆ ಫಕೀರಪ್ಪ ಕಾಕು ಅವರ ಮನೆ ಇದೆ. ಇನ್ನೊಂದು ಭಾಗದಲ್ಲಿ ಮಾಲತೇಶ ಸೀಗೆಹುಣಿವಿ ಇವರ ಮನೆ ಇದೆ.
2. ಆರೋಪಿತರು ಹಿಂದಿನ ರಸ್ತೆಯಿಂದ ಬೈಕ ತೆಗೆದುಕೊಂಡು ಬಂದರು. ದೇವಸ್ಥಾನದ ಹತ್ತಿರ ಸಿಂಗಾರ ಮಾಡುವಾಗ ಹಿಂದಿನಿಂದ ಯಾರು ಬರುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ನನ್ನ ಮುಂದೆ ಆರೋಪಿತರು ಹಾಗೂ ಪಿರ್ಯಾದಿಯ ಮದ್ಯೆ ಯಾವುದೇ ಸಂಬಾಷಣೆ ನಡೆದಿಲ್ಲ. ನನ್ನ ಸಮಕ್ಷಮ ಆರೋಪಿತರು ಹಾಗೂ ನಮ್ಮ ಚಿಕ್ಕಪ್ಪನ ಜಗಳ ಆಗಿರುತ್ತದೆ.
3. ಮೆರವಣಿಗೆ ನೋಡಲು ಈಡೀ ಊರ ಜನ ಸೇರಿರುತ್ತಾರೆ ಎಂದರೆ ಸರಿ. ಘಟನೆಯಾಗಿದೆ ಎಂದು ಹೇಳಿದ ದಿನವೂ ಸಹ ಬಹಳಷ್ಟು ಜನ ನಿಂತಿದ್ದರು . ನಾನು ಮುಮಾ-1 ಚಾಕು ಇಟ್ಟ ಬ್ಯಾಗನ್ನು ನೋಡಿರುವುದಿಲ್ಲ. ಆರೋಪಿತರ ಮದ್ಯೆ ದಿಃ 22.03.2022 ರಂದು ರಾತ್ರಿ 10.00 ಗಂಟೆಗೆ ಯಾವುದೇ ಜಗಳ ಆಗಿಲ್ಲ ಎಂದರೆ ಸರಿಯಲ್ಲ.
4. ಆರೋಪಿತರು ನನಗೆ ಚಾಕು ಹಾಕಿಲ್ಲ ಎಂದರೆ ಸರಿಯಲ್ಲ. ಫ್ರಾಸಾ-4 ಶಿವಕುಮಾರ ಹಾಗೂ ಫ್ರಾಸಾ-2 ಮಾಲತೇಶ ಅವರಿಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.
5. ದಿಃ 22.03.2022 ರಂದು ಸಾಯಂಕಾಲ 5.00 ಗಂಟೆಗೆ ಆರೋಪಿತರು ವಡ್ಡರ ಓಣಿಗೆ ನೀರು ಬಿಡಲು ಫ್ರಾಸಾ-1 ಜಗದೀಶ ಅವರಿಗೆ ಕೇಳಲು ಹೋಗಿದ್ದರು ಎಂದರೆ ಸರಿಯಲ್ಲ. ಆಗ ಫ್ರಾಸಾ-1

ಜಗದೀಶ ಹಾಗೂ ನಾನು ಆರೋಪಿತರೊಂದಿಗೆ ಜಗಳ ಮಾಡಿ , ಅವರ ವಾಹನಗಳನ್ನು ಜಖಂ ಮಾಡಿದೆವು ಎಂದರೆ ಸರಿ.

**6.** ಜಗಳವಾದ ಕಾರಣ ಶೈಲಾ ವಡ್ಡರ ನಿಮ್ಮ ಮೇಲೆ ಹಾನಗಲ ಪೋಲಿಸ ಠಾಣೆಯಲ್ಲಿ 45/22 ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ನಮ್ಮ ಮೇಲೆ ಆರೋಪಿತರು ಅಟ್ರಾಸಿಟಿ ಪ್ರಕರಣ ದಾಖಲಿಸಿಸಬಹುದು ಎಂದು ಈ ಸುಳ್ಳು ಪ್ರಕರಣವನ್ನು ಅವರ ವಿರುದ್ಧ ನಾನು ಹಾಗೂ ಪ್ರಾಸಾ-1 ಜಗದೀಶ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**7.** ನನ್ನನ್ನು ರಾತ್ರಿ 9.00 ಗಂಟೆಗೆ ಆಸ್ಪತ್ರೆಗೆ ನನ್ನ ತಂದೆ ಹಾಗೂ ಸ್ನೇಹಿತರು ಕರೆದುಕೊಂಡು ಹೋದರು. ಅಲ್ಲಿ ಒಂದುಗಂಟೆ ಇದ್ದು ನಂತರ ಜಿಲ್ಲಾಸ್ಪತ್ರೆಗೆ ಹೋಗಿರುತ್ತೇವೆ. ಜಿಲ್ಲಾಸ್ಪತ್ರೆಯಲ್ಲಿ 2- 3 ದಿನ ಇದ್ದೆ. ಹುಬ್ಬಳ್ಳಿ KMC ಯಲ್ಲಿ ಒಂದು ವಾರ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಟ್ರ್ಯಾಕ್ಟರ ಸಿಂಗಾರ ಮಾಡಿ , ಮೆರವಣಿಗೆ ಹೋಗುವ ಸಂದರ್ಬದಲ್ಲಿ ಬಿದ್ದು , ಗಾಯಗಳಾಗಿದ್ದವೇ ಹೊರತು ಆರೋಪಿತರು ನನ್ನ ಮೇಲೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ , ಅವರಿಂದ ಯಾವುದೇ ರೀತಿ ಗಾಯ ಆಗಿಲ್ಲ ಎಂದರೆ ಸರಿಯಲ್ಲ.

**8.** ನಾನು ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ಮೆರವಣಿಗೆ ಸಂದರ್ಬದಲ್ಲಿ ಪೋಲಿಸರು ಇರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗದೇ ಇದ್ದರೂ , ಆರೋಪಿತರು ಹಾಕಿದ ಪ್ರಕರಣದಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ನಾನು ಮುಮಾ-1 ನ್ನು ಗುಡಿಯ ಹತ್ತಿರ ನೋಡಿರುತ್ತೇನೆ. ಸದರಿ ಮುಮಾ-1 ಆರೋಪಿತರಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿತರು 5 ಗಂಟೆಗೆ ನೀರು ಬಿಡಲು ಪ್ರಾಸಾ-1 ಅವರನ್ನು ಕೇಳಲು ಬಂದಾಗ ಸದರಿಯವರ ವಾಹನವನ್ನು ಅಲ್ಲೆ ಹಿಡಿದುಕೊಂಡು , ನಂತರ ಈ ಪ್ರಕರಣದಲ್ಲಿ ಅವುಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ವಾಹನ ಆರೋಪಿತರಿಗೆ ಸಂಬಂದಿಸಿದ್ದಾಗಿರುತ್ತದೆ.

10. ನಾನು ನನ್ನ ಚಿಕ್ಕಪ್ಪ ಫ್ರಾಸಾ–1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿ ಇದೆ.**

**(ಅಶ್ವಿನಿ ವಿಜಯ ಶಿರಿಯಣ್ಣನವರ)**
**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಎಫ್.ಟಿ.ಎಸ್.ಸಿ.-1, ಹಾವೇರಿ**